ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದಕ್ಕೆ ಬೇಕಾದ ಹಣ ಒದಗಬೇಕು, ಮೆಟೀರಿಯಲ್ಸ್ ಸಪ್ಲೈ ಆಗಬೇಕು.

ಶ್ರೀ ಎಸ್. ಕರಿಯಪ್ಪನವರು.—ಲೈಟ್ ಹಾಕುವ ಸ್ಥಿತಿಯಲ್ಲಿದ್ದುದನ್ನು ನಿಲ್ಲಿಸಿರುವುದೇಕೆ ? ಕಳೆದ ಬಾರಿ ಸಾಮಾನು ಒದಗಿಸಿ ಲೈಟ್ ಹಾಕುವುದನ್ನು ಪ್ರಾರಂಭ ಮಾಡುವುದಾಗಿ ಸಂಬಂಧಪಟ್ಟವರು ತಿಳಿಸಿದ್ದರೂ ಹಾಗೆ ಕೆಲಸ ಮಾಡದೆ ನಿಲ್ಲಿಸಿರುವುದೇಕೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಮಾಡಿಲ್ಲ. ಇನ್ನೂ ಅಂದಾಜು ಮಂಜೂರಾಗಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಮಂಜೂರಾಗದೇ ಇರುವ ಕೆಲಸಗಳು ಕೆಲವು ಪ್ರಾರಂಭವಾಗಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ.

ಶ್ರೀ ಎಸ್. ಕರಿಯಪ್ಪನವರು.—ಆಲಹಳ್ಳಿಯಲ್ಲಿ ಆಗಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆದರೆ ಇದು ಕೋಡಿಹಳ್ಳಿಯ ವಿಷಯ.

ಶ್ರೀ ಎಸ್. ಕರಿಯಪ್ಪನವರು.—ಮಂಜೂರಾಗುವ ವಿಷಯ ಎರಡಕ್ಕೂ ಒಂದೇ ತಾನೆ. ಹೀಗಿರುವಾಗ ಒಂದು ಕಡೆ ಪ್ರಾರಂಭ ಮಾಡಿ ಇನ್ನೊಂದು ಕಡೆ ಮಾಡದೇ ಇರುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೋಡಿ ಹಳ್ಳಿಯ ಅಂದಾಜೇ ಬೇರೆ, ಆಲಹಳ್ಳಿಯ ಅಂದಾಜೇ ಬೇರೆ.

ಶ್ರೀ ಎಸ್. ಕರಿಯಪ್ಪನವರು.—ಈಗ ಈ ಹಳ್ಳಿಗೆ ವಿದ್ಯುಚ್ಛಕ್ತಿ ಒದಗಿಸುವ ವಿಷಯವನ್ನು ಸರ್ಕಾರದ ಮಂಜೂರಾತಿಗೆ ಪುನಃ ಒಪ್ಪಿಸಿದೆ ಎಂದು ಹೇಳಿದ್ದೀರಿ. ಹಿಂದೆ ಯಾವಾಗ ಒಪ್ಪಿಸಲ್ಪಟ್ಟಿತ್ತು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಿಂದೆ ಒಪ್ಪಿಗೆ ಆಗಿತ್ತು. ದುಡ್ಡಿಲ್ಲವೆಂಬುದಾಗಿ ಡೆಫರ್ ಮಾಡಿದ್ದರು. ಪುನಃ ಸರ್ಕಾರದ ಮಂಜೂರಾತಿಗೆ ಒಪ್ಪಿಸಲಾಗಿದೆ ಎಂದು ಹೇಳಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಹಾಗಾದರೆ ಬೇಗ ಮಂಜೂರು ಮಾಡುವ ಆಲೋಚನೆಯಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ಸರ್ಕಾರಕ್ಕೆ ಸೇರಿದ್ದು. ಸರ್ಕಾರ ಒಪ್ಪಿದರೆ ಆಗುತ್ತದೆ.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈಗ ತಾವು ಡೀಸಲ್ ಆಯಿಲ್ ಪಂಪಿಂಗ್ ಸೆಟ್ ಕೊಡುವುದಕ್ಕೆ ನಿರ್ಧರ ನಾಡಿರುವ ಪ್ರೊಸೀಜರ್‌ನಿಂದ ಬಹಳ ತಡವಾಗುತ್ತದೆ ಎಂಬುದು ಗೊತ್ತೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತಡ ಆದರೂ ಆಗಬಹುದು. ಡೀಸಲ್ ಆಯಿಲ್ ಪಂಪ್ ಕೊಡುವಾಗ ಅವರಿಗೆ ದುಡ್ಡು ಕೊಡುವ ಶಕ್ತಿ ಇದೆಯೋ ಇಲ್ಲವೋ ಎಂಬುದನ್ನು ನೋಡಿಕೊಂಡು ಕೊಡಬೇಕಾಗುತ್ತದೆ.

ಶ್ರೀ ಜಿ. ವೀರಪ್ಪನವರು.—ಒಂದು ವರ್ಷಕ್ಕೆ ಮೇಲ್ಪಟ್ಟು ಅರ್ಜಿಗಳು ಪೆಂಡಿಂಗ್ ಇರುವುದು ಗೊತ್ತೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇವೆ. ಸಾರ್ವೆ ಸಿ ಸರ್ಟಿಫಿಕೇಟು ಬರದೇ ಇದ್ದರೆ ಹಾಗೆ ಆಗುತ್ತದೆ.

ಶ್ರೀ ಜಿ. ವೀರಪ್ಪನವರು.—ಅರ್ಜಿ ಕೊಟ್ಟ ತಕ್ಷಣ ಅವರಿಗೆ ಪಂಪಿಂಗ್ ಸೆಟ್ ದೊರೆಯಲು ಸರ್ಕಾರದಿಂದ ನೂಕ್ತವಾದ ಏರ್ಪಾಡು ಮಾಡುವುದಕ್ಕಾಗುತ್ತದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತಕ್ಷಣ ಅಂದರೆ ಆಗುವುದಿಲ್ಲ. ಅವರ ಸ್ಥಿತಿಗತಿಗಳನ್ನು ತಿಳಿಯಬೇಕಾದರೆ ಡೆಪ್ಯೂಟಿ ಕಮಿಷನರು, ಅಮಲ್ದಾರರು ಶೇಕದಾರರು ಇವರೆಲ್ಲರಿಂದ ವಿಚಾರ ಮಾಡಬೇಕು. ಅವರಿಗೆ ಏನು ಆಸ್ತಿ ಇನೆ, ಸಾಲ ಎಷ್ಟಿದೆ ಎಂಬುದನ್ನೆಲ್ಲಾ ವಿಚಾರ ಮಾಡಬೇಕಾದರೆ ಸ್ವಲ್ಪ ಕಾಲ ತೆಗೆದುಕೊಳ್ಳುತ್ತದೆ.

ಶ್ರೀ ಜಿ. ವೀರಪ್ಪನವರು.—ಅಷ್ಟು ಜಾಗ್ರತೆ ಈ ಸೌಕರ್ಯ ಕಲ್ಪಿಸಿ ಕೊಡುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಜಾಗ್ರತೆ ವರದಿ ಕಳುಹಿಸಿ ಎಂದು ಹೇಳಿದ್ದೇವೆ. We cannot fix any time. ಹೀಗೇ ಮಾಡಬೇಕೆಂದು hard and fast rule ಮಾಡುವುದಕ್ಕಾಗುವುದಿಲ್ಲ.

Shifting the Epidemic Diseases Hospital, Robertsonpet.

Q.—108. **Sri M. MUNISWAMY** (Kolar District—Depressed Class).—

Will the Government be pleased to state.—

(*a*) the report of the Committee constituted to make recommendations pertaining to the removal of the E.D. Hospital, Robertsonpet, from the present place ;

(*b*) the reasons for the delay in removing the said Hospital, if the Committee had made recommendations for its removal ?

A.—**The Hon'ble Sri H. SIDDAIYA** (Minister for Revenue and Excise).—

(*a*) Government have not constitued any Committee for the shifting of the E.D. Hospital, Robertsonpet.

(*b*) Does not arise in view of the reply to clause (*a*). However, the question of shifting the E.D. Hospital at K.G.F. is under consideration.

Sri M. MUNISWAMY.—May I know what was the report about the E.D. Hospital in K.G.F. by Janab Mahmood Shariff, then Minister for Public Health ?

The Hon'ble Sri H. SIDDAIYA.—We have called for comprehensive proposals from the Sanitary Board as well as from the local officers.

Sri M. MUNISWAMY.—Do the Government know that the E.D. Hospital, being located in the heart of Robertsonpet, will spread disease to the people ? Is it not necessary to shift it to an isolated place ?

The Hon'ble Sri H. SIDDAIYA.—That seems to be absolutely necessary. That is why these proposals are now being made.

Sri M. MUNISWAMY.—Will the Government do that at an early date ?

The Hon'ble Sri H. SIDDAIYA.—In fact we have received a report both from the Deputy Commissioner and from the Senior Surgeon on 10th September 1951 and the matter will be expedited.

Bad condition of Channapatna-Sathanur Road.

Q.—58. **Sri S. KARIAPPA** (Bangalore District—General).—

Will the Government be pleased to state.—

(*a*) the number of buses that ply in the Channapatna-Sathanur Road;

(*b*) the condition of the road at present?

A.—**The Hon'ble Sri T. MARIAPPA** (Home Minister).—

(*a*) Eight.

(*b*) Not good.

ಶ್ರಿ ಎಸ್. ಕರಿಯಪ್ಪನವರು.—ಈ ಚನ್ನಪಟ್ಟಣ-ಸಾತನೂರು ರಸ್ತೆ ಎಷ್ಟು ವರ್ಷಗಳಿಂದ ಇದೇ ಸ್ಥಿತಿಯಲ್ಲಿ ಇದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಮೂರು ವರ್ಷದಿಂದ ಈ ರೀತಿ ನಾದುರಸ್ತಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ನಾನು ಕಂಡ ಹಾಗೆ 7-8 ವರ್ಷದಿಂದ ಈ ಸ್ಥಿತಿಯಲ್ಲಿದೆ ಎಂದರೆ ಒಪ್ಪುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು ಸುಮಾರಾಗಿತ್ತು. ಬಸ್ಸುಗಳು ಓಡಾಡುವುದು ಜಾಸ್ತಿ ಆದಮೇಲೆ ವೇರ್ ಔಟ್ ಜಾಸ್ತಿಯಾಗಿದೆ. ಈಗ 3-3½ ವರ್ಷದಿಂದ ನಾದುರಸ್ತಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ಇದಕ್ಕೆ ಸಾಲಾ ಬಾದು ಕಾಮಗಾರಿಗಾಗಿ ಮೈಲಿ ಒಂದಕ್ಕೆ ಎಷ್ಟು ರೂಪಾಯಿ ಒದಗಿಸಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು 200 ರೂಪಾಯಿ ಇತ್ತು. ಈಗ ರೀಕ್ಲಾಸಿಫಿಕೇಷನ್ ಕಮಿಟಿ ತೀರ್ಮಾನದ ಪ್ರಕಾರ 400 ರೂಪಾಯಿ ಮಾಡಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಸ್ಪೆಷಲ್ ಗ್ರಾಂಟ್ ಕೊಟ್ಟು ರಸ್ತೆ ದುರಸ್ತು ಮಾಡತಕ್ಕ ಇಚ್ಛೆ ಇದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 4,200 ರೂಪಾಯಿ ಸ್ಪೆಷಲ್ ಗ್ರಾಂಟ್ ಕೊಟ್ಟಿದ್ದೇವೆ. ಅದನ್ನು ಈ ವರ್ಷ ಖರ್ಚು ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಮೂರು ವರ್ಷಕ್ಕೆ ಮುಂಚೆ ಎಷ್ಟು ಬಸ್ಸುಗಳು ಓಡಾಡುತ್ತಾ ಇದ್ದವು ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡರು.—ಈಗ ಆ ರಸ್ತೆಯಲ್ಲಿ 8 ಬಸ್ಸುಗಳು ಓಡಾಡುತ್ತಿರುವುದು ಜಾಸ್ತಿ ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದೂ ಸಾಲದು, ಇನ್ನೂ ಜಾಸ್ತಿ ಬೇಕು ಎಂದು ಕೇಳುವವರೂ ಇದ್ದಾರೆ.

ಶ್ರೀ ಬಿ. ಚನ್ನಬೈರೇಗೌಡರು.—ಈ 8 ಬಸ್ಸುಗಳು ಓಡಾಡುವುದಕ್ಕೆ ಪ್ರಾರಂಭವಾದ ಮೇಲಲ್ಲವೇ ರಸ್ತೆ ನಾದುರಸ್ತಾದುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೊಂದೇ ಕಾರಣ ಅಲ್ಲ. ಗ್ರಾಂಟು ಕಮ್ಮಿ ಇತ್ತು. ಆದ್ದರಿಂದ ರೀಕ್ಲಾಸಿಫಿಕೇಷನ್ ಕಮಿಟಿಯವರು ಜಾಸ್ತಿ ಕೊಡಬೇಕೆಂದು ಹೇಳಿದ ಮೇಲೆ 400 ರೂಪಾಯಿ ಕೊಟ್ಟಿದ್ದೇವೆ. ಅಲ್ಲದೆ ಸ್ಪೆಷಲ್ ಗ್ರಾಂಟು 4,200 ರೂಪಾಯಿ ಕೊಟ್ಟಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಆ ಹಣವನ್ನು ಡಿಸ್ಟ್ರಿಕ್ಟ್ ಬೋರ್ಡ್ ಫಂಡಿನಿಂದ ಕೊಟ್ಟಿದ್ದೀರಾ, ಅಥವಾ ಸರ್ಕಾರದವರೇ ನೇರವಾಗಿ ಕೊಟ್ಟಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

Rules for grant of Bus Permits to private individuals or institutions.

Q.—156. **Sri T. RAMACHAR** (Kolar District—General).—

Will the Government be pleased to state.—

the rules, if any, framed by them for the grant of bus permits to private individuals or institutions?

A.—**The Hon'ble Sri T. MARIAPPA** (Home Minister).—

(*a*) The grant of permits for stage carriages (buses) is governed by the provisions of Sections 46 to 48 of the Indian Motor Vehicles Act, 1939, and of Chapter IV of the Mysore Motor Vehicles and Road Traffic Rules, 1945. A copy indicating the relevant provisions is laid on the Table of the House.

(Copy placed in the Assembly Library, No. 20.)

ಶ್ರೀ ಟಿ. ರಾಮಾಚಾರ್ಯರು.—ಈಚೆಗೆ ಒಂದೆರಡು ವರ್ಷಗಳಿಂದ ಈ ನಿಬಂಧನೆಗಳನ್ನು ಅನುಸರಿಸಿಲ್ಲ, ಅವು ಆಚರಣೆಯಲ್ಲಿಲ್ಲ ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಚರಣೆಯಲ್ಲಿವೆ.

ಶ್ರೀ ಟಿ. ರಾಮಾಚಾರ್ಯರು.—ಈಗ ಒಂದೆರಡು ವರ್ಷಗಳಿಂದ ಆಚರಣೆಯಲ್ಲಿಲ್ಲದೆ ನೇರವಾಗಿ ಸರ್ಕಾರದ ವರಿಗೇ ಅರ್ಜಿ ಬಂದು ತೀರ್ಮಾನವಾಗುತ್ತಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾತ್ಕಾಲಿಕವಾಗಿ ಕೊಡಬಹುದು ಎಂಬುದಾಗಿ ಅದಕ್ಕೂ ಅಧಿಕಾರ ಏದೆ.

ಶ್ರೀ ಟಿ. ರಾಮಾಚಾರ್ಯರು.—ಹಾಗೆ ಕೊಡುವುದರಿಂದ ಈ ನಿಯಮಗಳನ್ನು ಉಲ್ಲಂಘನೆಮಾಡಿ ಪ್ರಭಾವ ಶಾಲಿಗಳಾದ ಕೆಲವರಿಗೆ ಅವಕಾಶ ಕೊಟ್ಟು ಇತರರಿಗೆ ಅವಕಾಶವಿಲ್ಲದಂತಾಗುತ್ತಿದೆಯಲ್ಲವೆ?